ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1288
ಸದಸ್ಯರ ಹೆಸರು	:	ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	23-09-2021

ಕ್ರ.ಸಂ.	ಪ್ರಶ್ನೆಗಳು	ಉತ್ತರ
ಅ	ಹಿಂದಿನ ಸರ್ಕಾರದಲ್ಲಿ ಕರ್ನಾಟಕ ಸರ್ಕಾರದ ಎರಡನೇ ವರ್ಷಾಚರಣೆ 2021-2022ನೇ ಸಾಲಿಗೆ ಸಂಬಂಧಿಸಿದಂತೆ ವಾರ್ತಾ KTPP 2005 ಅಧಿನಿಯಮ ಅಡಿಯಲ್ಲಿ 4(G) ವಿನಾಯಿತಿ ಪಡೆದುಕೊಂಡಿದೆಯೇ; ಆರ್ಥಿಕ ಇಲಾಖೆ ವಿನಾಯಿತಿ ನೀಡಲಾಗಿದೆಯೇ;	ಹಿಂದಿನ ಸರ್ಕಾರದಲ್ಲಿ ಆಚರಿಸಲಾದ ಸರ್ಕಾರದ ಎರಡನೇ ವರ್ಷಾಚರಣೆಯ ಸಮಾರಂಭವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 2005, ನಿಯಮ 4(G) ಅಡಿಯಲ್ಲಿ ವಿನಾಯಿತಿ ಹೊಂದಿರುವ ರಾಜ್ಯ ಸರ್ಕಾರಿ ಸ್ವಾಮ್ಯದ ಮೆ: ಕಿಯೋನಿಕ್ಸ್ ಸಂಸ್ಥೆಯಿಂದ ಅನುಷ್ಠಾನಗೊಳಿಸಲಾಗಿದೆ. ಆದ್ದರಿಂದ ಪ್ರತ್ಯೇಕವಾಗಿ ಕೆ.ಟಿ.ಪಿ.ಪಿ. 4(G) ಅಡಿಯಲ್ಲಿ ವಿನಾಯಿತಿ ಅಗತ್ಯವಿರುವುದಿಲ್ಲ.
ಆ	ಹಾಗಿದ್ದಲ್ಲಿ, ವಿನಾಯಿತಿಗೆ ಆದೇಶ ನೀಡಿದ/ಸಹಿ ಮಾಡಿದ ಅಧಿಕಾರಿ ಯಾರು; ಆದೇಶ ನೀಡಿದ್ದೇ ಆದರೆ, ವಾರ್ತಾ ಇಲಾಖೆಯ ಯಾವ ಯಾವ ಶಾಖೆಗಳಲ್ಲಿ ಅನುಷ್ಠಾನ ಮಾಡಲಾಯಿತು; ಇದಕ್ಕೆ ಪಾವತಿಸಿರುವ ಮೊತ್ತ ಎಷ್ಟು? (ಸಂಪೂರ್ಣ ಮಾಹಿತಿ ನೀಡುವುದು)	ಪ್ರಶ್ನೆ ಉದ್ಭವಿಸುವುದಿಲ್ಲ. ಸಮಾರಂಭದ ಒಟ್ಟು ವೆಚ್ಚ ರೂ.54,19,836/- + ಅನ್ವಯವಾಗುವ ತೆರಿಗೆ ಪ್ರತ್ಯೇಕ

ಕೆಸಿಐ-ಪಿಐಪಿ/272/2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ